# ಬಾಳಸಂಜೆಯ ಬಂಧುಗಳಿಗೆ ಹೀಗೊಂದು 'ಡೇ ಕೇರ್'

ನೊಂದ ಮಹಿಳೆಯರಿಗೆ ಸಾಂತ್ವನ ನೀಡಿ ಬದುಕಿನಲ್ಲಿ ಧೈರ್ಯ ತುಂಬಲು ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ಈ 'ಡೇ ಕೇರ್' ಮಹಿಳೆಯರಿಗೆ, ವೃದ್ಧರಿಗೆ ನೆಮ್ಮದಿಯ ತಾಣವಾಗಿದೆ.

■ **ನಳಿನ ಡಿ.**

ಮಹಿಳೆಯೊಬ್ಬರು ಅನಾಥಾಶ್ರಮವೆಂದು ತಿಳಿದು ಏಕಾಏಕಿ ಸೇವಾ ಸದನದೊಳಗೆ ಬರುತ್ತಾರೆ. ಯಥಾ ಪ್ರಕಾರ ಅಲ್ಲಿನ ಹಿರಿಯಜ್ಜಿಯ ಬಳಿ ಬಂದು ಅತ್ತೆ-ನಾದಿನಿಯರ ಕಾಟ ತಡೆಯದೆ ಮನೆ ಬಿಟ್ಟು ಆಶ್ರಮ ಸೇರಲು ಬಂದುದೆಂದು ವರ್ಣಿಸಿ ಅಳುತ್ತಾರೆ. ಆ ಹಿರಿಯಜ್ಜಿ ಹೆಣ್ಣು ಮಗಳನ್ನು ಸಮಾಧಾನಪಡಿಸಿ ಕಂಗೆಟ್ಟ ಅವಳಿಗೆ ಉಪಚರಿಸುತ್ತಾರೆ. ಊಟ ಬಡಿಸಿ ಮಗಳ ಮಮತೆ ತೋರುತ್ತಾರೆ. ಬಲ್ಲವರನ್ನು ಕರೆಸಿ ಕೌನ್ಸೆಲಿಂಗ್ ಮಾಡಿಸುತ್ತಾರೆ. ಸಂಜೆ ಟೀ ಕುಡಿಯುವ ಸಮಯದಲ್ಲಿ ಆ ಹೆಣ್ಣುಮಗಳಿಗೆ ಅಜ್ಜಿಯ ಮಾತು, ಮನಸ್ಸು ತುಂಬಾ ತುಂಬಿಸಿದ ಪ್ರೀತಿ ನೆನಪಾಗಿ ಕಣ್ತುಂಬುತ್ತದೆ. ಹೋಗಿ ಬರುತ್ತೇನೆ ಅಜ್ಜಿ ಎನ್ನುತ್ತಾ ಆಕೆ ಮರಳಿ ಮನೆಗೆ ಹೊರಟು ನಿಲ್ಲುತ್ತಾಳೆ. ಆಕೆಯ ಮುಖದಲ್ಲೇನೋ ಗೆದ್ದ ಭಾವ, ಆತಂಕ ಮರೆತು ಹೋಗಿ ಜಾಗೃತವಾದ ವಿಶ್ವಾಸ.

ಗಂಡ-ಹೆಂಡಿರ ಗಲಾಟೆಯಿಂದ ಬೇಸತ್ತು ಮಧ್ಯವಯಸ್ಸಿನ ಮಹಿಳೆಯೊಬ್ಬರು ಅಜ್ಜಿಯ ಮನೆಗೆ ಹೋಗುತ್ತಾರೆ, ಕೌನ್ಸಿಲಿಂಗ್‌ನಲ್ಲಿ ಅಜ್ಜಿ ತಾಳ್ಮೆಯಿಂದ ಅವರ ವೃತ್ತಾಂತ ಆಲಿಸುತ್ತಾರೆ. ಕಳೆದ ಬಾರಿಯು ಇದೇ ದಂಪತಿಗಳಿಗೆ ಕೌನ್ಸೆಲಿಂಗ್ ಮಾಡಿದ್ದರ ಅರಿವಿದೆ ಅವರಿಗೆ. ಒಟ್ಟಿನಲ್ಲಿ ದಾಂಪತ್ಯ ಮುರಿಯಬಾರದು, ಗಂಡ ಹೆಂಡತಿ ಮನಸ್ಸು ಒಂದಾಗಬೇಕು ಎಂಬ ನಿಟ್ಟಿನಲ್ಲಿ ಕೆಲಸ ಮಾಡುತ್ತಾರೆ. ದಂಪತಿ ಹಿಂದಿರುಗುವಾಗ ಹೆಚ್ಚಿನ ಭರವಸೆ ಮೂಡುವಂತೆ ಮಾಡುತ್ತಾರೆ.

ಇದು ಎರಡು ಸ್ಯಾಂಪಲ್ ಅಷ್ಟೆ. ನೂರಾರು ಅವಿದ್ಯಾವಂತ ಮಹಿಳೆಯರಿಗೆ, ಸೂಕ್ತ ತರಬೇತಿ ನೀಡಿ ದುಡಿಮೆಯ ದಾರಿಯನ್ನೂ ತೋರಿಸಿದ ಈ ಹಿರಿಯ ಅಜ್ಜಿ ಸರೋಜಾ ಬನ್ನಪ್ಪ. ವಯಸ್ಸು 80. ಮಗ ಮೋಟಾರ್ ರೇಸ್‌ನಲ್ಲಿ ಕಾಲವಾದ ಕೆಲವೇ ತಿಂಗಳುಗಳಲ್ಲಿ ಪತಿ ಇಲ್ಲವಾದರು. ಇವರನ್ನು ಕಂಗೆಡಿಸಿದ ದುಃಖದಿಂದ ಹೊರಬರಲು ಕಂಡುಕೊಂಡಿದ್ದು ಸಮಾಜದ ದುರ್ಬಲರ, ದುಃಖಿತರ ಸೇವೆ. ಸರೋಜಮ್ಮನವರು ಬೆಂಗಳೂರಿನ ಮಲ್ಲೇಶ್ವರಂನಲ್ಲಿ 'ಶಂಕರಿ ಬಳಗ' ಎಂಬ ವೃದ್ಧರಿಗಾಗಿ ಡೇ ಕೇರ್ ನಡೆಸುತ್ತಾರೆ. ಕಷ್ಟದಲ್ಲಿರುವ ಹಿರಿಯ ನಾಗರಿಕರನ್ನು ಹಿರಿಯಕ್ಕನಂತೆ ಉಪಚರಿಸುತ್ತಾರೆ. ನೊಂದ ಎಲ್ಲ ಹೆಣ್ಣು ಮಕ್ಕಳಿಗೂ ಮುಕ್ತವಾಗಿ ತಮ್ಮ ಡೇ ಕೇರ್‌ನಲ್ಲಿ ನೆಮ್ಮದಿಯಾಗಿ ಇರಲು ಅವಕಾಶ ಕಲ್ಪಿಸಿದ್ದಾರೆ.

### ಆರಂಭ ಹೇಗೆ?

ಶಂಕರಿ ಬಳಗ ಕೇವಲ 15 ಜನ ಸೇವಾ ಪರ ಮಹಿಳಾ ಸದಸ್ಯರಿಂದ 1995ರಲ್ಲಿ ಆರಂಭವಾದ ಸೇವಾ ಸಂಸ್ಥೆ. ಈಗ 350ಕ್ಕೂ ಹೆಚ್ಚು ಸದಸ್ಯೆಯರಿದ್ದಾರೆ. ಮಹಿಳೆಯರನ್ನು ಸ್ವಾವಲಂಬಿಯಾಗಿಸುವ ನಿಟ್ಟಿನಲ್ಲಿ ಹೊಲಿಗೆ, ನಿಟ್ಟಿಂಗ್, ಫಿನಾಯಿಲ್, ಸೋಪು, ಶ್ಯಾಂಪು, ಮೇಣದ ಬತ್ತಿ ತಯಾರಿಕೆಯಂತಹ ವಿವಿಧ ರೀತಿಯ ತರಬೇತಿಯೂ ಇಲ್ಲಿ ನಡೆಯುತ್ತದೆ.



ಸನ್ಮಾನ ಸ್ವೀಕರಿಸುತ್ತಿರುವ ಡೇ ಕೇರ್‌ನ ರೂವಾರಿ ಸರೋಜಾ ಬನ್ನಪ್ಪ

ಬಳಗದ ಸದಸ್ಯೆಯರು ಪ್ರತಿಷ್ಠಿತ ವೈದ್ಯಕೀಯ ಸೌಲಭ್ಯಗಳುಳ್ಳ ಆಸ್ಪತ್ರೆಗಳೊಂದಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರಗಳನ್ನು ಏರ್ಪಡಿಸುತ್ತಾರೆ. ಕಳೆದ ಆರು ವರ್ಷಗಳಿಂದ ನಡೆಸುತ್ತಿದ್ದ ವೃದ್ಧಾಶ್ರಮಕ್ಕೆ ಸ್ವಂತ ಕಟ್ಟಡ ನಿರ್ಮಾಣದ ಕನಸು ಕಂಡವರು ಮಹಾಮನೆಯ ರೂವಾರಿ ಸರೋಜಮ್ಮ ಬನ್ನಪ್ಪ. ಈಗ ಈ ವೃದ್ಧಾಶ್ರಮಕ್ಕೆ ನಿವೇಶನ ಸಿಕ್ಕಿದೆ. ದಾನಿಗಳು ನೀಡಿದ ಹಣ ಜಮೆ ಆಗಿ ಇಂದು ಮಲ್ಲೇಶ್ವರಂನಲ್ಲಿ ಮೂರಂತಸ್ತಿನ ಕಟ್ಟಡವೂ ಸಿದ್ಧವಾಗಿದೆ. 60 ವರ್ಷ ಮೇಲ್ಪಟ್ಟ ಹಗಲು ಯೋಗಕ್ಷೇಮ ಕೇಂದ್ರಕ್ಕೆ ಸರ್ಕಾರದ ಸಹಯೋಗವೂ ದೊರೆತಿದೆ. ಯಾರೇ ಆಗಲಿ ಬಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ನೆಮ್ಮದಿಯಿಂದ ಕಾಲ ಕಳೆಯಬಹುದು, ಸಮಾನ ಮನಸ್ಕರೊಡನೆ ಬೆರೆಯಬಹುದು.

ಇದರ ಪೂರ್ಣ ಹೆಸರು 'ಶಂಕರಿ ಸಂಧ್ಯಾ ಸದನ ವಯೋವೃದ್ಧರ ಡೇ ಕೇರ್ ಕೇಂದ್ರ'. ಇದನ್ನು ಶಂಕರಿ ಬಳಗ-ಶಂಕರಿ ಪ್ರತಿಷ್ಠಾನದ ಸಹಯೋಗದೊಂದಿಗೆ ಆರಂಭಿಸಿದೆ. ಕೆಲ ತಿಂಗಳ ಹಿಂದಷ್ಟೇ ಸಂಧ್ಯಾ ಸದನ ತನ್ನ ನೂತನ ಕಟ್ಟಡಕ್ಕೆ ಪದಾರ್ಪಣೆಯೂ ಆಗಿದೆ. ಮೆಟ್ರೋ ನಗರದಲ್ಲಿ ಎಲ್ಲರೂ ಬ್ಯುಸಿ. ಹೀಗೆ ಬ್ಯುಸಿ ಜನರ ನಡುವೆ ಹಣ್ಣಾದ ಜೀವಗಳು ಏಕಾಂಕಿಯಾಗಿ ಕೊರಗುತ್ತವೆ. ಎಷ್ಟೋ ಮಂದಿ ಮನೆಯಲ್ಲಿಯೇ ತಂದೆ ತಾಯಿಯರನ್ನು ನೋಡಿಕೊಂಡರೂ ಸಹ ಖಾಲಿ ಜಾಗಗಳೊಂದಿಗೆ ಎಷ್ಟು ಹೊತ್ತು ಕಳೆಯಬಹುದು? ಬೆಳಗ್ಗೆ ಹೋದವರು ರಾತ್ರಿಯೇ ಹಿಂದಿರುಗುವುದು, ಹೀಗಿರುವಾಗ ಏನೆಂದು ಯಾರಿಗೆ ದೂರುವುದು ಎಂದು ಹಿರಿ ಜೀವಗಳು ಮನೆಯೊಳಗೆ ಬಂಧಿಯಾಗಲೇಬೇಕಾದ ಅನಿವಾರ್ಯತೆ ಇದೆ.

ಹೀಗೆ ಒಂಟಿಯಾಗಿ ಉಳಿಯುವ ಹಿರಿ ಜೀವಗಳಿಗೆ ನೆರವಾಗುವ ತುಡಿತ ಹೊಂದಿದ್ದ ಸರೋಜ ಬನ್ನಪ್ಪನವರು ತಮ್ಮ ಹಿರಿಯ ಪ್ರಾಯದಲ್ಲಿಯೂ ಅಬಲರಿಗೆ, ವೃದ್ಧರಿಗೆ ಆಶ್ರಯದಾತರಾಗಿದ್ದಾರೆ. ಮಹಿಳಾ ದೌರ್ಜನ್ಯಗಳನ್ನು ತಡೆಯುವ ನಿಟ್ಟಿನಲ್ಲಿ 'ಸಾಂತ್ವನ' ಯೋಜನೆಯೊಂದು ಜಾರಿಯಲ್ಲಿದ್ದು, ಕೌಟುಂಬಿಕ ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ನ್ಯಾಯ ಒದಗಿಸುವ ಕಾರ್ಯ ನಡೆಸುತ್ತಿದ್ದು, ಅಲ್ಪಕಾಲಿಕ ತಂಗುದಾಣದ ವ್ಯವಸ್ಥೆಯನ್ನೂ ಕಲ್ಪಿಸಿದೆ. ತೀರಾ ಸಂಕಷ್ಟದಲ್ಲಿರುವ ಹೆಣ್ಣು ಮಕ್ಕಳಿಗೆ ಆಶ್ರಯ ನೀಡಿ ಯೋಗಕ್ಷೇಮ ನೋಡಿಕೊಳ್ಳುತ್ತಾ ಕ್ರಮೇಣ ಉದ್ಯೋಗ ವ್ಯವಸ್ಥೆಯನ್ನು ಕಲ್ಪಿಸುವುದು ಈ ಯೋಜನೆಯ ಗುರಿ.

ಸರೋಜ ಬನ್ನಪ್ಪ ಅವರು ತುಂಬು ಕುಟುಂಬದ ಒಡತಿ. ಇವರು ಸಂಸಾರದಿಂದೇನೂ ದೂರವಾಗಿಲ್ಲ. ಮಗ, ಮಗಳು ವಿವಾಹಿತರಾಗಿ ವಿದೇಶದಲ್ಲಿ ಉನ್ನತ ಹುದ್ದೆಯಲ್ಲಿದ್ದಾರೆ. ಸ್ಥಿತಿವಂತರಾಗಿದ್ದು, ಕಾರು, ಬಂಗಲೆ ಏನೇ ಇದ್ದರೂ ಮಾನಸಿಕ ತೃಪ್ತಿಗಾಗಿ ಅವರು ಇತರರ ಸಹಾಯಕ್ಕೆ ಮುಂದಾದರು. ಸ್ಥಿತಪ್ರಜ್ಞ ಮಹಿಳೆಯಾದ ಅವರು ತಮ್ಮ ಕುಟುಂಬದೊಂದಿಗೆ ಶಂಕರಿ ಕುಟುಂಬವನ್ನು ಸಲಹುತ್ತಿದ್ದಾರೆ. ಬೆಳಿಗ್ಗೆಯಿಂದ ಸಂಜೆಯವರೆಗೂ ಪರರ ಸೇವೆಯಲ್ಲಿ ಬಳಗದಲ್ಲಿ ಕಳೆದರೆ ಸಂಜೆಗೆ ಮತ್ತೆ ಮೊಮ್ಮಕ್ಕಳನ್ನು ನೆನೆಸಿಕೊಂಡು ಮನೆಗೆ ಹೊರಟು ನಿಲ್ಲುತ್ತಾರೆ. ಇಲ್ಲಿನ ವಯೋವೃದ್ಧರಿಗೆ ಮಲ್ಲೇಶ್ವರಂನಲ್ಲಿರುವ ಹಳ್ಳಿಮನೆ ಹೋಟೇಲ್‌ನವರು ಉಚಿತವಾಗಿ ಮಧ್ಯಾಹ್ನದ ಊಟ ಪೂರೈಸುತ್ತಾರೆ. ಸದ್ಯ ಡೇ ಕೇರ್ ಆಗಿರುವ ವೃದ್ಧಾಶ್ರಮವನ್ನು ಫುಲ್ ಟೈಂ ವಸತಿ ತಾಣ ಮಾಡುವ ಗುರಿ ಇವರದು.

ಸರೋಜಮ್ಮನವರ ಬತ್ತದ ಜೀವನೋತ್ಸಾಹಕ್ಕೆ ರಾಜ್ಯ ಸರ್ಕಾರವು ಪ್ರಶಸ್ತಿ ನೀಡಿದೆ. ನಾಡಿನಾದ್ಯಂತ ನೂರಾರು ಸಂಘ ಸಂಸ್ಥೆಗಳು ಅವರಿಗೆ ಪ್ರಶಸ್ತಿ ನೀಡಿ ಗೌರವಿಸಿವೆ.

80ರ ಹರಯದಲ್ಲಿಯೂ 20ರ ಯುವಕರನ್ನು ನಾಚಿಸುವಂತಹ ಹುರುಪು. 'ವಯೋವೃದ್ಧರನ್ನು ನೋಯಿಸಬೇಡಿ, ನಾವು ಅವರಿಗಾಗಿ ದುಡಿಯುತ್ತೇವೆ' ಎನ್ನುವ ಅವರಿಗೆ ನೈತಿಕ, ಆರ್ಥಿಕ ಬೆಂಬಲ ಸಹೃದಯರು ನೀಡಬೇಕಾಗಿದೆ. ಸರೋಜ ಬನ್ನಪ್ಪ ಫೋನ್: 080 23342347; 9986439072. ■